# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1056 |
| ಸದಸ್ಯರ ಹೆಸರು | ಶ್ರೀ ಗೋವಿಂದರಾಜು |
| ಉತ್ತರಿಸುವ ದಿನಾಂಕ | 28-12-2022 |
| ಉತ್ತರಿಸುವವರು | ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಎಲ್ಲಾ ದೇವಸ್ಥಾನ ಗಳಿಗೆ ವಿವಿಧ ಧಾರ್ಮಿಕ ಕೇಂದ್ರಗಳಿಗೆ ಮತ್ತು ಪುರಾತನ ದೇವಸ್ಥಾನಗಳಿಗೆ ಮೂಲಭೂತ ಸೌಲಭ್ಯ ಹಾಗೂ ಭಕ್ತಾಧಿಗಳಿಗೆ ಸೌಕರ್ಯಗಳನ್ನು ಕಡ್ಡಾಯವಾಗಿ ಒದಗಿಸುವ ಬಗ್ಗೆ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೇ: | ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ಪ್ರವರ್ಗ "ಎ" ಮತ್ತು "ಬಿ" ಗುಂಪಿನ ದೇವಸ್ಥಾನಗಳಿಗೆ ಬರುವ ಭಕ್ತಾಧಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ರವರ ಸುತ್ತೋಲೆ ಸಂಖ್ಯೆ: ಸಿ.ಎನ್.ಆರ್/ 1/ಸಿಆರ್/346/2010-11 ದಿನಾಂಕ:22.03.2011ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ. |
| ಆ) | ರಾಜ್ಯದಲ್ಲಿರುವ ಪುರಾತನ ದೇವಸ್ಥಾನ (ಪುರಾತತ್ವ ಇಲಾಖೆ ವ್ಯಾಪ್ತಿ) ಹಾಗೂ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಸ್ಥಾನಗಳ ಸಂಖ್ಯೆಯೆಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಸ್ಥಾನಗಳ ಒಟ್ಟು ಸಂಖ್ಯೆ:34563. ಜಿಲ್ಲಾವಾರು ಅಂಕಿ ಅಂಶಗಳ ಮಾಹಿತಿಯ ಪಟ್ಟಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br>ಪುರಾತತ್ವ ಇಲಾಖೆಯಿಂದ ಪಡೆದಿರುವ ಮಾಹಿತಿಯನ್ವಯ ರಾಜ್ಯ ಪುರಾತತ್ವ ಇಲಾಖೆಯ 497 ದೇವಸ್ಥಾನಗಳ ಹಾಗೂ ಕೇಂದ್ರ ಪುರಾತತ್ವ ಇಲಾಖೆಯ 291 ದೇವಸ್ಥಾನಗಳ ಪಟ್ಟಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಇ) | ಕಳೆದ ಮೂರು ವರ್ಷದಿಂದ ಎಷ್ಟು ದೇವಸ್ಥಾನದಲ್ಲಿ ಭಕ್ತಾಧಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಮತ್ತು ಶೌಚಾಲಯ ಮತ್ತಿತರ ಸೌಲಭ್ಯಗಳನ್ನು ಒದಗಿಸಲು ಯಾವ ಯೋಜನೆಯಡಿಯಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. | ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ಅಧಿಸೂಚಿತ ಪ್ರವರ್ಗ "ಎ" ಮತ್ತು "ಬಿ" ಶ್ರೇಣಿಯ ದೇವಸ್ಥಾನಗಳಿಗೆ ಬರುವ ಭಕ್ತಾಧಿಗಳಿಗೆ ದೇವಾಲಯಗಳಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯ ಮತ್ತು ಶೌಚಾಲಯ ದಂತಹ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಈಗಾಗಲೇ ಇಲಾಖೆಯ ವತಿಯಿಂದ ಸುತ್ತೋಲೆ ಸಂಖ್ಯೆ: ಸಿಎನ್ಆರ್.1/ಸಿಆರ್ 346/2010-11 ದಿನಾಂಕ:22-03-2011ನ್ನು ಹೊರಡಿಸಲಾಗಿರುತ್ತದೆ.<br>ಅದರಂತೆ ಅಧಿಸೂಚಿತ ದೇವಾಲಯಗಳಲ್ಲಿ ಸಾರ್ವಜನಿಕ ಭಕ್ತಾಧಿಗಳ ಅನುಕೂಲಕ್ಕಾಗಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ತಗಲುವ ವೆಚ್ಚವನ್ನು ಆಯಾಯ ದೇವಾಲಯಗಳ ನಿಧಿಯಿಂದ ಭರಿಸಿ ನಿರ್ವಹಿಸಲಾಗಿರುತ್ತದೆ.<br>ವಿವರವನ್ನು **ಅನುಬಂಧ-3** ರಲ್ಲಿ ಒದಗಿಸಿದೆ) |

ಈ) ಧಾರ್ಮಿಕ ಕೇಂದ್ರಗಳ ಪ್ರದೇಶಗಳಲ್ಲಿ ಶುಚಿತ್ವಕ್ಕೆ ಒತ್ತುಕೊಡುವ ಕುರಿತು ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಹಾಗೂ ಕ್ರಿಯಾಯೋಜನೆಗಳಾವುವು:

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ 3(1) ರಂತೆ ದೇವಾಲಯಗಳ ಆದಾಯಕ್ಕೆ ಅನುಗುಣವಾಗಿ ಈ ಕೆಳಕಂಡಂತೆ ವರ್ಗೀಕರಿಸಲಾಗಿರುತ್ತದೆ.

| ಪ್ರವರ್ಗ | ವರ್ಗೀಕರಣ | ಸಂಸ್ಥೆಗಳ ಸಂಖ್ಯೆ |
|---|---|---|
| ಎ | ವಾರ್ಷಿಕ ವರಮಾನವು ರೂ ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು | 205 |
| ಬಿ | ವಾರ್ಷಿಕ ವರಮಾನವು ರೂ ಐದು ಲಕ್ಷಗಳನ್ನು ಮೀರಿ ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು | 193 |
| ಸಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು | 34165 |
| | **ಒಟ್ಟು** | **34563** |

ಅ) ರಾಜ್ಯದಲ್ಲಿರುವ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ 205 ಪ್ರವರ್ಗ "ಎ" ದೇವಾಲಯಗಳಿಗೆ ದಿನನಿತ್ಯ ಹತ್ತು ಸಾವಿರದಿಂದ ಇಪ್ಪತ್ತು ಸಾವಿರದ ವರೆಗೆ ಯಾತ್ರಾರ್ಥಿಗಳು ಭೇಟಿ ನೀಡುತ್ತಾರೆ. ಈ ಹಿನ್ನಲೆಯಲ್ಲಿ ಸದರಿ ದೇವಾಲದಲ್ಲಿ ತ್ಯಾಜ್ಯ ಉತ್ಪನ್ನವು ಅಧಿಕ ಪ್ರಮಾಣದಲ್ಲಿ ಇರುತ್ತದೆ. ಹೀಗೆ ಸಂಗ್ರಹವಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಿ ಸ್ವಚ್ಛತೆಯನ್ನು ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳುವ ಸಲುವಾಗಿ ಪ್ರಪ್ರಥಮವಾಗಿ, ಪ್ರಮುಖವಾಗಿರುವ ಪ್ರವರ್ಗ "ಎ" 25 ದೇವಾಲಯಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದ್ದು, ಸದರಿ ದೇವಾಲಯಗಳಿಂದ ಸುಮಾರು 100 ಕೆ.ಜಿಗೂ ಮೇಲ್ಪಟ್ಟು ತ್ಯಾಜ್ಯವು ದಿನ ನಿತ್ಯ ಸಂಗ್ರಹವಾಗುತ್ತಿರುವುದನ್ನು ಪರಿಗಣಿಸಿ, ಪ್ರಾಥಮಿಕ ಹಂತದಲ್ಲಿ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ನಿರ್ಮಿಸಿ ಅವುಗಳನ್ನು ವೈಜ್ಞಾನಿಕವಾಗಿ ವಿಲೇಗೊಳಿಸಲು ಕ್ರಮಕೈಗೊಂಡು ದೇವಾಲಯದಲ್ಲಿ ಸ್ವಚ್ಛತೆಯನ್ನು ಕಾಪಾಡಲು ಆದ್ಯತೆ ನೀಡಲಾಗಿದೆ.

ಪ್ರಥಮ ಆದ್ಯತೆ ಮೇರೆಗೆ ಆಯ್ಕೆ ಮಾಡಿಕೊಳ್ಳಲಾದ ಪ್ರವರ್ಗ "ಎ" ಅಧಿಸೂಚಿತ ದೇವಾಲಯಗಳಲ್ಲಿ, ತ್ಯಾಜ್ಯ ನಿರ್ವಹಣೆ ಘಟಕಗಳನ್ನು ಸ್ಥಾಪಿಸಲು ಅಗತ್ಯವಿರುವ, ಸಾಕಷ್ಟು ಸ್ಥಳಾವಕಾಶ ಲಭ್ಯವಿರುವುದರಿಂದ ಪ್ರಸ್ತಾಪಿತ ದೇವಾಲಯಗಳಲ್ಲಿ ತ್ಯಾಜ್ಯ ನಿರ್ವಹಣೆ ಘಟಕಗಳನ್ನು ಸ್ಥಾಪಿಸುವ ಸಲುವಾಗಿ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು, ಸದರಿ ಕಾಮಗಾರಿಯು 2023ನೇ ಸಾಲಿನಲ್ಲಿ ಪೂರ್ಣಗೊಳ್ಳಲಿದೆ.

......3

| | | |
|---|---|---|
| | | ಆ) ತ್ಯಾಜ್ಯ ನಿರ್ವಹಣ ಘಟಕಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಿ ಸ್ವಚ್ಛತೆಯನ್ನು ನಿರ್ವಹಣೆ ಮಾಡಲು ಆಯಾಯ ದೇವಾಲಯದ ಸಿಬ್ಬಂದಿಗಳಿಗೆ ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ಕಾರ್ಯಗಾರವನ್ನು ಹಮ್ಮಿಕೊಂಡು ತರಬೇತಿಯನ್ನು ನೀಡಿ, ತ್ಯಾಜಗಳ ವೈಜ್ಞಾನಿಕ ನಿರ್ವಹಣೆ ಯನ್ನು ಆಯಾಯ ದೇವಾಲಯಗಳ ವತಿಯಿಂದಲೇ ಮಾಡಲು ಕ್ರಮಕೈಗೊಳ್ಳಲಾಗಿದೆ. ಅದರಂತೆ 2 ದಿನಗಳ ಕಾರ್ಯಗಾರವನ್ನು 6 ವಿವಿಧ ಸ್ಥಳಗಳಲ್ಲಿ ಹಮ್ಮಿಕೊಂಡು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು, ವ್ಯವಸ್ಥಾಪನ ಸಮಿತಿ ಸದಸ್ಯರು ಹಾಗೂ ಆಯಾಯ ದೇವಾಲಯದ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿರುತ್ತದೆ.<br><br>ಇ) ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮುಜರಾಯಿ ತಹಶೀಲ್ದಾರ್, ಧಾರ್ಮಿಕ ದತ್ತಿ ಸಹಾಯಕ ಆಯುಕ್ತರು ಮತ್ತು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಕೂಡ ಮುಂದಿನ ದಿನಗಳಲ್ಲಿ, ದೇವಾಲಯಗಳಲ್ಲಿ ಸಂಗ್ರಹವಾಗುವ ತ್ಯಾಜಗಳ ವೈಜ್ಞಾನಿಕ ನಿರ್ವಹಣೆಯ ಬಗ್ಗೆ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿರುತ್ತದೆ.<br><br>ಈ) ಇನ್ನಿತರೇ ಪ್ರವರ್ಗ "ಎ" ಮತ್ತು ಪ್ರವರ್ಗ "ಬಿ" ದೇವಾಲಯಗಳಲ್ಲಿ 100 ಕೆ.ಜಿಗೂ ಕಡಿಮೆ ಪ್ರಮಾಣದಲ್ಲಿ ತ್ಯಾಜ್ಯಗಳು ದಿನನಿತ್ಯ ಸಂಗ್ರಹವಾಗುತ್ತಿದ್ದು, ಅದನ್ನು ವಿಲೇವಾರಿ ಮಾಡಿ ಸ್ವಚ್ಛತೆಯನ್ನು ಕಾಪಾಡಲು ಸ್ಥಳೀಯ ಗ್ರಾಮ ಪಂಚಾಯತಿ ಮತ್ತು ನಗರಸಭೆಗಳ ಸಹಭಾಗಿತ್ವದಲ್ಲಿ ದೇವಾಲಯಗಳ ಸ್ವಚ್ಛತೆ ನಿರ್ವಹಣೆ ಮಾಡಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ.<br><br>ಉ) ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದಲೂ ಸಹ ತ್ಯಾಜ್ಯಗಳ ನಿರ್ವಹಣೆ ಮಾಡಲು ಹಾಗೂ ದೇವಾಲಯದಲ್ಲಿ ಶುಚಿತ್ವವನ್ನು ಕಾಪಾಡುವ ಹಿತ ದೃಷ್ಟಿಯಿಂದ 2021ನೇ ಸಾಲಿನಿಂದ ಆಯಾಯ ದೇವಾಲಯದ ಆಯವ್ಯಯದಲ್ಲಿ ಹಣ ಮೀಸಲಿರಿಸಲಾಗಿದೆ.<br><br>ಊ) ಎಲ್ಲಾ ಪ್ರವರ್ಗ "ಸಿ" ದೇವಾಲಯಗಳಲ್ಲಿ ತುಂಬ ಕಡಿಮೆ ಪ್ರಮಾಣದಲ್ಲಿ ತ್ಯಾಜ್ಯಗಳು ದಿನನಿತ್ಯ ಸಂಗ್ರಹವಾಗುತ್ತಿದ್ದು, ತ್ಯಾಜಗಳ ನಿರ್ವಹಣೆಯನ್ನು ಆಯಾಯ ದೇವಾಲಯಗಳ ವತಿಯಿಂದಲೇ ಮಾಡಲಾಗುತ್ತಿದೆ.<br><br>ಋ) ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ: ಎಡಿಎಂ11/ ಇತರೆ/ಸಿಆರ್ /219/2014-15, ದಿನಾಂಕ:02.12.2022ರಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ಮತ್ತು ಘೋಷಿತ ದೇವಾಲಯ/ಸಂಸ್ಥೆಗಳಲ್ಲಿ ಸಂಪೂರ್ಣ ಪ್ಲಾಸ್ಟಿಕ್ ನಿರ್ಬಂಧಿಸುವುದು ಹಾಗೂ ಸ್ವಚ್ಛತೆ ಕಾಪಾಡುವ ಬಗ್ಗೆ ಸುತ್ತೋಲೆಯನ್ನು ಹೊರಡಿಸಿ ದೇವಾಲಯಗಳ ಶುಚಿತ್ವಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿರುತ್ತದೆ. |
| ಉ) | ಕಳೆದ ಮೂರು ವರ್ಷದಿಂದ ಇಲಾಖೆ ರೂಪಿಸಿರುವ ಕ್ರಿಯಾ ಯೋಜನೆಯಂತೆ ಎಲ್ಲಾ ಸೌಲಭ್ಯಗಳನ್ನು ನೀಡಲಾಗಿದೆಯೇ: ನೀಡಿದ್ದರೆ, ವರದಿ ನೀಡುವುದು ಬಾಕಿ ಇದ್ದಲ್ಲಿ ಕಾರಣವೇನು? | ಈ ಮೇಲ್ಕಂಡ ಅಂಶಗಳ ವಿವರದಂತೆ ಪ್ರವರ್ಗ "ಎ" ಶ್ರೇಣಿಯ 25 ದೇವಾಲಯಗಳಲ್ಲಿ ಕಳೆದ ಮೂರು ವರ್ಷದಿಂದ ಧಾರ್ಮಿಕ ದತ್ತಿ ಇಲಾಖೆಯು ರೂಪಿಸಿರುವ ಕ್ರಿಯಾ ಯೋಜನೆಯಂತೆ ಒದಗಿಸಲಾದ ಸೌಲಭ್ಯಗಳ ಮಾಹಿತಿ/ ವರದಿಯನ್ನು **ಅನುಬಂಧ-4** ರಲ್ಲಿ ಒದಗಿಸಿದೆ.<br><br>**(ಅನುಬಂಧ-1, 2, 3 ಮತ್ತು 4 ರ ಮಾಹಿತಿಯು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು)** |

ಸಂಖ್ಯೆ: ಕಂಇ 232 ಮುಸಪ್ರ 2022

**(ಶಶಿಕಲಾ. ಅ. ಜೊಲ್ಲೆ)**
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು